

ಹೊಲಗಳಲ್ಲಿ ಒಣಗಿದ ಬೆಳೆಗಳು ಪಶುಗಳ ಮೇವಿಗೆ
ಚಿತ್ರ: ಸುನೀಲ ಕುಮಾರ್ ಸುಧಾಕರ

**ರೈತನ ಒಡಲಾಳ**

## ಮುಂದಿನ ದಿನಗಳು ಕಷ್ಟಕರ



ತುಂಗಾ ತೀರದ ತೀರ್ಥಹಳ್ಳಿ, ಕುಪ್ಪಳಿ ಪ್ರದೇಶದಲ್ಲಿ ಬೀಳುವ ಮಳೆಯನ್ನು ಹಲವು ವರ್ಷಗಳಿಂದ ಅಳೆಯುತ್ತಿದ್ದೇವೆ. ನಮ್ಮ ಅನುಭವದ ಪ್ರಕಾರ, ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆಯೇ ಬಾರದೇ ಇರುವ ವರ್ಷವನ್ನು ನಾವು ನೋಡಿಲ್ಲ. ಸಾಮಾನ್ಯವಾಗಿ ಜೂನ್‌ನಲ್ಲಿ ತೀರ್ಥಹಳ್ಳಿಯಲ್ಲಿ 30ರಿಂದ 40 ಇಂಚು ಮಳೆಯಾಗುತ್ತದೆ. ಈ ವರ್ಷ 5 ಇಂಚು ಮಳೆಯಾಗಿದೆ. ಜುಲೈ ತಿಂಗಳಲ್ಲಿ 50 ಇಂಚು ಮಳೆಯಾಗುವುದು ವಾಡಿಕೆಯಾದರೆ, ಈ ವರ್ಷ ಬಂದ ಮಳೆ 30 ಇಂಚು. ಆಗಸ್ಟ್ ತಿಂಗಳಿನಲ್ಲಿ ಕಳೆದ ವರ್ಷ 25ರಿಂದ 30 ಇಂಚು ಮಳೆ ಸುರಿದ ಲೆಕ್ಕ ನಮ್ಮ ಬಳಿಯಿದೆ. ಈ ಬಾರಿ ಒಂದೆರಡು ಇಂಚು ಮಳೆ ಸುರಿದಿರಬಹುದು. ಪಶ್ಚಿಮ ಘಟ್ಟದ ಈ ಪ್ರದೇಶದಲ್ಲಿ ಇಷ್ಟೊಂದು ಕಡಿಮೆ ಮಳೆಯಾದ ಉದಾಹರಣೆಯೇ ನೆನಪಿಲ್ಲ. ತೀವ್ರ ಬಿಸಿಲಿನ ತಾಪಕ್ಕೆ ಭೂಮಿ ಮೇಲಿರುವ ನೀರು ಬೇಗನೇ ಒಣಗಿ ಹೋಗುತ್ತಿದೆ. ನಮ್ಮ ಮನೆಯ ಬಳಿ ಪ್ರತೀ ವರ್ಷ ಮಳೆಗಾಲದಲ್ಲಿ ಕಾಣಿಸಿಕೊಳ್ಳುತ್ತಿದ್ದ ನಾಗಬನ ಜಲ ಈ ಬಾರಿ ಹರಿದೇ ಇಲ್ಲ. ಮಳೆಗಾಲ ಆರಂಭಕ್ಕೆ ಮರಗಪ್ಪೆಗಳ ಓಟವಿರಲಿಲ್ಲ. ಕಪ್ಪೆಗಳ ವಟವಟ ಸದ್ದಿರಲಿಲ್ಲ. ನನ್ನ ಅನುಭವದ ಮಟ್ಟಿಗೆ ಇಂಥ ಮಳೆಗಾಲವನ್ನು ನಾನು ಕಂಡಿಲ್ಲ. ಘಟ್ಟದ ಮೇಲೆ ಇಷ್ಟೊಂದು ಒಣಬಿಸಿಲಿದ್ದರೆ ನದಿಗಳಲ್ಲಿ ನೀರು ತುಂಬುವುದಿಲ್ಲ. ಮುಂದಿನ ದಿನಗಳು ಕಷ್ಟಕರವಾಗಲಿವೆ.

**-ಕಡಿದಾಳ್ ಪ್ರಕಾಶ್,**
ತೀರ್ಥಹಳ್ಳಿ

ಪಾರುಪತ್ಯೆ ಎಂಬುದು ಅವರ ಅಭಿಪ್ರಾಯ.

ಅಡಿಕೆಗೆ ಬೆಲೆಯೂ ತಕ್ಕಮಟ್ಟಿಗೆ ಚೆನ್ನಾಗಿಯೇ ಇದೆ. ಒಟ್ಟಿನಲ್ಲಿ 'ಜೋಳದ ನಾಡು' ಎಂದು ಕರೆಸಿಕೊಳ್ಳುತ್ತಿದ್ದ ಚೆನ್ನಗಿರಿ ತಾಲ್ಲೂಕು ಈಗ 'ಅಡಿಕೆ ನಾಡು' ಎಂಬ ಹೊಸ ನಾಮಕರಣ ಮಾಡಿಕೊಳ್ಳುವ ಸಂಭ್ರಮದಲ್ಲಿದೆ. ಅಲ್ಲಿ ಈಗಾಗಲೇ ಮೆಕ್ಕೆ ಜೋಳದ ಬೆಳೆ ಕೈಗೆ ಬರುವುದಿಲ್ಲ ಎಂಬುದು ಖಾತ್ರಿಯಾಗಿದೆ. ಮೂರ್ನಾಲ್ಕು ವರ್ಷಗಳ ಹಿಂದೆ ಅಡಿಕೆ ಬೆಳೆಗೆ ವರ್ಗಾವಣೆ ಹೊಂದಿದ್ದ ರೈತರು ಈ ವರ್ಷ ಅಡಿಕೆ ಗಿಡಗಳನ್ನಾದರೂ ಉಳಿಸಿಕೊಳ್ಳುವುದು ಹೇಗೆ ಎಂಬ ಚಿಂತೆಯಲ್ಲಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ, ಕಳಸ, ಕುದುರೆಮುಖ ಮುಂತಾದೆಡೆ ಚೆನ್ನಾಗಿ ಮಳೆ ಬಂದ್ರೆ ಭದ್ರಾ ಜಲಾಶಯದಲ್ಲಿ ನೀರು ಕಾಣಬಹುದು. ಅಲ್ಲಿ ಮಳೆಯಿಲ್ಲ, ಇಲ್ಲಿ ನೀರಿಲ್ಲ.

ಇರುವ ನೀರನ್ನೇ ಬಳಸಿ ಹೇಗಾದರೂ ಬೆಳೆ ಉಳಿಸಿಕೊಳ್ಳಬೇಕು ಎಂದು ನಿರ್ಧರಿಸಿ ಗದಗ ಮತ್ತು ಲಕ್ಷ್ಮೇಶ್ವರ ಭಾಗದ ರೈತರು ಇತ್ತೀಚೆಗೆ ಬಳಕೆ ಮಾಡಿದ ಚರಂಡಿ ನೀರನ್ನು ಹೊಲಗಳಿಗೆ ಹರಿಸಲು ಶತಾಯಗತಾಯ ಪ್ರಯತ್ನ ಮಾಡಿದರು. ಅವರು ಬಿತ್ತಿದ್ದು ಈರುಳ್ಳಿ, ಮೆಣಸಿನಕಾಯಿ, ಹತ್ತಿ, ಶೇಂಗಾ. ಜುಲೈ ತಿಂಗಳಲ್ಲಿ ಒಂದಿಷ್ಟು ದಿನಗಳ ಕಾಲ ಇಣುಕಿ ನೋಡಿದ ಮಳೆಯು ಮತ್ತೆ ಮಾಯವಾಗಿದೆ. ಆಗಸ್ಟ್ ತಿಂಗಳ ಪೂರ್ತಿ ಬಿಸಿಲಿನಲ್ಲಿ ಒಣಗಿದ ಬೆಳೆಗೆ ಇತ್ತೀಚೆಗೆ ಕೆಲವು ರೈತರು ಟ್ಯಾಂಕರ್‌ಗಳಲ್ಲಿ ನೀರು ಖರೀದಿಸಿ ಬೆಳೆಗಳಿಗೆ ಹರಿಸಿದರು. ಹೊಲಗಳಿಗೆ ಹರಿಸಲು ಶುದ್ಧ ನೀರೇನೂ ಬೇಕಾಗಿಲ್ಲವಲ್ಲ. ಹಾಗಾಗಿ ಲಕ್ಷ್ಮೇಶ್ವರ ಪಟ್ಟಣದಿಂದ ಹೊರವಲಯದ ಚರಂಡಿಗೆ ಹರಿಯುವ ಬಳಕೆ ಮಾಡಿದ ನೀರನ್ನು ತುಂಬಿಸಿಕೊಂಡು ಟ್ಯಾಂಕರ್‌ಗಳು ಹೊಲದತ್ತ ಓಡಿದವು. ಟ್ಯಾಂಕರ್ ಮಾಲೀಕರೂ ಇದುವೇ ಸುಗ್ಗಿ ಎಂಬಂತೆ ನೀರಿನ ಬೆಲೆ ಏರಿಕೆ ಮಾಡಿದ್ದಾರೆ. ನೀರು ತುಂಬಿಸುವ ಜಾಗದಿಂದ ಹೊಲಗಳು ದೂರವಿದ್ದರೆ ನೀರು ಸಾಗಾಟದ ಬೆಲೆ ಮತ್ತಷ್ಟು ಜಾಸ್ತಿಯಾಗುತ್ತಿದೆ. ಆದ್ದರಿಂದ ಈ ವಿಧಾನವನ್ನು ಶ್ರೀಮಂತ ರೈತರಷ್ಟೇ ಅನುಸರಿಸುತ್ತಿದ್ದಾರೆ. ನೀರಿನಂತೆ ದುಡ್ಡು ಚೆಲ್ಲುವ ಸಾಮರ್ಥ್ಯವಿಲ್ಲದ ರೈತರು ನೀರಿರುವ ತೋಡು, ಕೆರೆಗಳ ಬಳಿ ಪಂಪ್‌ಸೆಟ್‌ಗಳನ್ನು ಇರಿಸಿ ನೀರನ್ನು ಹೊಲಗಳಿಗೆ ಹಾಯಿಸುವ ಪ್ರಯತ್ನ ಮಾಡುತ್ತಿದ್ದಾರೆ. 'ಈ ನೀರನ್ನು ಬರಿದೇ ಹಾಯಿಸುವ ಬದಲಾಗಿ ಹನಿ ನೀರಾವರಿ ವಿಧಾನವನ್ನು ಅನುಸರಿಸಿ ನೀರನ್ನು ಹೆಚ್ಚು ದಿನಗಳ ಕಾಲ ಉಳಿಸಿಕೊಳ್ಳುವಂತೆ ಪ್ರಯತ್ನಿಸಿ' ಎಂದು ಕೃಷಿ ಇಲಾಖೆ ಅಧಿಕಾರಿಗಳು ಸಲಹೆ ನೀಡುತ್ತಿದ್ದಾರೆ.

ರಾಜ್ಯದಲ್ಲಿ ಬರ ಪರಿಸ್ಥಿತಿಯು ನಿಚ್ಚಳವಾಗುತ್ತಿದ್ದಂತೆಯೇ ಸರ್ಕಾರವು ನಷ್ಟವಾಗಿರುವ ಬೆಳೆ ಪ್ರಮಾಣ ಎಷ್ಟು ಎಂಬುದರ ಸಮೀಕ್ಷೆ ನಡೆಸುತ್ತಿದೆ. ಬರ ಪೀಡಿತ ತಾಲ್ಲೂಕುಗಳನ್ನು ಗುರುತಿಸಿದೆ. ಕೇಂದ್ರ ಸರ್ಕಾರಕ್ಕೆ ಪತ್ರವೊಂದನ್ನು ಬರೆದಿರುವ ರಾಜ್ಯ ಸರ್ಕಾರ, ಬರ ಪರಿಸ್ಥಿತಿಯನ್ನು ಘೋಷಿಸಲು ರಚಿಸಿರುವ ಮಾನದಂಡಗಳನ್ನು ಪರಿಷ್ಕರಿಸಬೇಕು ಎಂದು ಕೋರಿದೆ. ಇಡೀ ರಾಜ್ಯಕ್ಕೆ ಅನ್ವಯವಾಗುವ ಏಕರೂಪ ಮಾನದಂಡದಿಂದಾಗಿ ಎಲ್ಲ ರೈತರ, ಅಂದರೆ 14 ಕೃಷಿ ಹವಾಮಾನ ಪ್ರದೇಶದ (agro climatic regions)ರೈತರ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ. 'ಆಯಾ ಪ್ರದೇಶದ ಪರಿಸರ, ನೀರಿನ ಲಭ್ಯತೆ ಮತ್ತು ಕೃಷಿ ಪರಿಪಾಟಗಳನ್ನು ಗಮನಿಸಿಕೊಂಡು, ಪ್ರದೇಶವನ್ನು ಕೇಂದ್ರೀಕರಿಸಿ ಮಾನದಂಡವನ್ನು ರೂಪಿಸಬೇಕು. ಬರ ಪರಿಸ್ಥಿತಿಯನ್ನು ಘೋಷಿಸಲು ಅನುವು ಮಾಡಿಕೊಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಗೆ ಪತ್ರ ಬರೆದಿದ್ದಾರೆ.

ಮಳೆ ಬರದೇ ಇರಲು ಕಾರಣವೇನು ಎಂಬ ಪ್ರಶ್ನೆಗೆ ಸಾವಿರ ಮಂದಿ ಸಾವಿರ ಕಾರಣಗಳನ್ನು ಕೊಡಬಲ್ಲರು. ಆದರೆ ಮಳೆ ಬರುವುದಕ್ಕೆ ಪೂರಕವಾಗಿ ನೀವು ನಿಮ್ಮ ಬದುಕನ್ನು ಹೇಗೆ ಬದಲಿಸಿಕೊಂಡಿರಿ ಎಂಬ ಪ್ರಶ್ನೆಗೆ ಉತ್ತರಿಸಬಲ್ಲವರು ಕೆಲವರಷ್ಟೇ. ಮಳೆಯಿಲ್ಲದೆ ಬದುಕಿಲ್ಲ ಎಂಬ ಅರಿವಿದ್ದರೂ ನಾವು ಏನೂ ಮಾಡಲಾರದೆ ಆಕಾಶವನ್ನು ದಿಟ್ಟಿಸಿ ನೋಡುತ್ತಾ ಕುಳಿತುಬಿಡುತ್ತೇವೆ. ಪೂಜೆ ಪುನಸ್ಕಾರಗಳನ್ನೆಲ್ಲ ಮಾಡಿದರೆ ಮಳೆ ಬರುತ್ತದೆಯೇ? ಕಣ್ಣಿಗೆ ಕಾಣುವ ಗಿಡಮರಗಳನ್ನೆಲ್ಲ ಕಡಿದು ಕಾಂಕ್ರೀಟು ಕಾಡು ಮಾಡುವಾಗ ಮಳೆಯ ನೆನಪೇ ಆಗುವುದಿಲ್ಲವಲ್ಲ. ಮೋಡ ಕಟ್ಟದೇ ಮಳೆ ಹೇಗಾಗುವುದು ಎಂದು ಅರವಿಂದ ಕುಲಕರ್ಣಿ ಅವರು ಪ್ರಶ್ನಿಸುತ್ತಾರೆ. ಈ ಪ್ರಶ್ನೆ ಸರಳವಾಗಿದೆ. ಉತ್ತರವೂ ಸರಳವಾಗಿಯೇ ಇದೆ. ಆದರೆ ಮನಸ್ಸು ಮಾಡಬೇಕಾದ ನಮ್ಮ ಆಲೋಚನೆಗಳು ಸರಳವಾಗಿಲ್ಲ.

ಪ್ರತಿಕ್ರಿಯಿಸಿ: feedback@sudha.co.in